ಪಿಡಬ್ಲ್ಯೂ.1: ಮೊಹಮ್ಮದ್ ಅಜೀಮುಲ್ಲಾ.,

**ದಿನಾಂಕಃ 27.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು Electric and hardware shop ನಡೆಸುತ್ತೇನೆ ಹಾಗೂ Civil Defence ನಲ್ಲಿ ಸೇವೆ ಸಲ್ಲಿಸುತ್ತೇನೆ. ಆರೋಪಿ 2024 ನೇ ಇಸವಿಯಿಂದ ಪರಿಚಯವಿರುತ್ತಾರೆ. ಆರೋಪಿ ಚಿನ್ನ-ಬೆಳ್ಳಿ ಕೆಲಸ ಮಾಡುತ್ತಾರೆ. ಆರೋಪಿ ನಿಮ್ಮ ಬಳಿ ಹಣ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಒಟ್ಟು ರೂ.5,50,000/- ರೂ. ಹಣವನ್ನು ನಗದಾಗಿ ನೀಡಿರುತ್ತೇನೆ. 20 ಸಾವಿರ ರೂ.ಗಳಿಗಿಂತ ಮೇಲ್ಪಟ್ಟ ಹಣವನ್ನು ನಗದಾಗಿ ನೀಡುವಂತಿಲ್ಲ ಎಂದರೆ ಸಾಕ್ಷಿಯು ಆರೋಪಿ ನಗದಾಗಿ ನೀಡಿ ಎಂದು ಕೇಳಿದ ಕಾರಣ ನಗದಾಗಿ ನೀಡಿದೆನು ಎಂದು ನುಡಿಯುತ್ತಾರೆ. ಆರೋಪಿ ನಿಮ್ಮ ಬಳಿ ವ್ಯವಹರಿಸಿರುವುದಿಲ್ಲ ಶೈಲೇಶ್ ಎಂಬುವವರ ಬಳಿ ವ್ಯವಹರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಶೈಲೇಶ್ ರವರಿಗೆ ನೀಡಿದ ಚೆಕ್ಕನ್ನು ನೀವು ದುರುಪಯೋಗಪಡಿಸಿಕೊಂಡು ನೀವು ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ವಿವಾದಿತ ಚೆಕ್ಕುಗಳಲ್ಲಿ ನೀವೇ ಸಹಿ ಮಾಡಿ ಬ್ಯಾಂಕಿಗೆ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ಶೈಲೇಶ್ ಎಂಬುವವರ ಬಳಿ ಮೂರು ಲಕ್ಷ ರೂ.ಗಳನ್ನು ಮಾತ್ರ ಪಡೆದುಕೊಂಡಿದ್ದರು ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ನೀವು ಪೊಲೀಸರು ಎಂದು ಆರೋಪಿಗೆ ತಿಳಿಸಿ ಅವರಿಗೆ ಹೆದರಿಸಿ ಅವರಿಂದ ಸುಮಾರು ರೂ.2,65,000/- ಗಳನ್ನು ಗೂಗಲ್ ಪೇ ಹಾಗೂ ಫೋನ್ ಪೇ ಮುಖಾಂತರ 2023 ನೇ ಇಸವಿಯಿಂದ ವಸೂಲಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ಕೇವಲ 35 ಸಾವಿರ ರೂ.ಗಳನ್ನು ಮಾತ್ರ ನೀಡಬೇಕಾಗಿದ್ದು ಆರೋಪಿ ನೀಡಿದಂತಹ ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ನೀವೇ ಭರ್ತಿ ಮಾಡಿ ಬ್ಯಾಂಕಿಗೆ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ.

ಆರೋಪಿಯಿಂದ ಅಕ್ರಮ ಲಾಭ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.